# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 13 ಇಆಇ 2015

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 18ನೇ ಮಾರ್ಚ್ 2015

## ಸುತ್ತೋಲೆ

ವಿಷಯ: ಸರ್ಕಾರಿ ನೌಕರರು ಮತ್ತು ಕುಟುಂಬದ ಅವಲಂಬಿತ ಸದಸ್ಯರುಗಳಿಗೆ ನಗದು ರಹಿತ ವೈದ್ಯಕೀಯ ಚಿಕಿತ್ಸೆ ಒದಗಿಸುವ ಜ್ಯೋತಿ ಸಂಜೀವಿನಿ ಯೋಜನೆಯ ಅನುಷ್ಠಾನದ ಬಗ್ಗೆ.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 14 ಎಸ್.ಎಂ.ಆರ್.2013, ಬೆಂಗಳೂರು, ದಿನಾಂಕ 18.08.2014

* * * * * *

ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅವಲಂಬಿತ ಸದಸ್ಯರುಗಳಿಗೆ ನಗದು ರಹಿತ ವೈದ್ಯಕೀಯ ಚಿಕಿತ್ಸೆ ಒದಗಿಸಲು "ಜ್ಯೋತಿ ಸಂಜೀವಿನಿ" ಎಂಬ ನೂತನ ಯೋಜನೆಯನ್ನು ಉಲ್ಲೇಖಿತ ದಿನಾಂಕ: 18.08.2014ರ ಸರ್ಕಾರಿ ಆದೇಶದನ್ವಯ 2014-15ನೇ ಸಾಲಿನಿಂದ ಜಾರಿಗೊಳಿಸಲು ಸರ್ಕಾರವು ಮಂಜೂರಾತಿ ನೀಡಿದೆ.

2. ಈ ಯೋಜನೆಯ ಫಲಾನುಭವಿಗಳಾಗಲು ಪ್ರತಿಯೊಬ್ಬ ಸರ್ಕಾರಿ ನೌಕರರು ಅವರ ಕುಟುಂಬ ಮತ್ತು ಅವಲಂಬಿತರ (ಉಲ್ಲೇಖಿತ ದಿನಾಂಕ 18.08.2014 ಆದೇಶದಲ್ಲಿ ನಮೂದಿಸಿರುವಂತೆ) ಮಾಹಿತಿಯನ್ನು ಮಾನವ ಸಂಪನ್ಮೂಲ ಯೋಜನೆಯ ತಂತ್ರಾಂಶದಲ್ಲಿ ನೊಂದಾಯಿಸಬೇಕಿರುತ್ತದೆ.

3. ಆದುದರಿಂದ, ಪ್ರತಿಯೊಬ್ಬ ಸರ್ಕಾರಿ ನೌಕರರು ಅವರ ಕುಟುಂಬ ಮತ್ತು ಅವಲಂಬಿತರ ಆಧಾರ್ ಸಂಖ್ಯೆಯನ್ನು ಮಾನವ ಸಂಪನ್ಮೂಲ ಯೋಜನೆಯಲ್ಲಿ "Family and Dependent details" ನಡಿ ನಮೂದಿಸುವುದು ಅಗತ್ಯವಾಗಿದೆ. ಮೊದಲು ನೌಕರರ ಆಧಾರ್ ಸಂಖ್ಯೆ ನೊಂದಾಯಿಸಿದ ನಂತರ ಅವರ ಕುಟುಂಬ ಮತ್ತು ಅವಲಂಬಿತರ ಆಧಾರ್ ಸಂಖ್ಯೆಯನ್ನು ನಮೂದಿಸಬೇಕಿರುತ್ತದೆ. ಹೀಗೆ ಮಾಡಿದಾಗ ನೌಕರರ ಹಾಗೂ ಅವರ ಕುಟುಂಬ ಮತ್ತು ಅವಲಂಬಿತರ ಛಾಯ ಚಿತ್ರವು (ಫೋಟೋ) ಮಾನವ ಸಂಪನ್ಮೂಲ ಯೋಜನೆಯ ತಂತ್ರಾಂಶದಲ್ಲಿ ಡೌನ್ ಲೋಡ್ ಆಗಿ ಖಾಯಂ ಆಗಿ ಉಳಿಯುವುದು.

4. ನಿಗದಿಪಡಿಸಿದ ಎಲ್ಲಾ ಆಸ್ಪತ್ರೆಗಳಿಗೆ ನೌಕರರ ಮತ್ತು ಅವರ ಅವಲಂಬಿತರ ಮಾಹಿತಿಯನ್ನು ಮಾನವ ಸಂಪನ್ಮೂಲ ತಂತ್ರಾಂಶದಲ್ಲಿ ನೋಡಲು ನೇರ ಸಂಪರ್ಕ ಒದಗಿಸಲಾಗಿದೆ. ಹಾಗಾಗಿ ನೌಕರರು ಹಾಗೂ ಅವರ ಕುಟುಂಬ ಮತ್ತು ಅವಲಂಬಿತರು ನೇರವಾಗಿ ನಿಗದಿ ಪಡಿಸಿದ ಆಸ್ಪತ್ರೆಗಳಿಗೆ ಭೇಟಿ ನೀಡಿ "ಜ್ಯೋತಿ ಸಂಜೀವಿನಿ" ಸೇವೆಯನ್ನು ಪಡೆಯಲು ಬಹಳ ಸುಲಭವಾಗುತ್ತದೆ.

5. ಆಧಾರ್ ಸಂಖ್ಯೆಗಾಗಿ ನೊಂದಾಯಿಸುವ ಸಮಯದಲ್ಲಿ, ತಮ್ಮ ವೈಯಕ್ತಿಕ ಮಾಹಿತಿಯನ್ನು ಡೌನ್ ಲೋಡ್ ಮಾಡಿಕೊಳ್ಳಲು ಸಂಬಂಧಿಸಿದ ವ್ಯಕ್ತಿ ಅನುಮತಿ ನೀಡಿದಲ್ಲಿ ಮಾತ್ರ , ಮಾನವ ಸಂಪನ್ಮೂಲ ಯೋಜನೆಯಲ್ಲಿ ಛಾಯಚಿತ್ರ ಡೌನ್ ಲೋಡ್ ಮಾಡಲು ಸಾಧ್ಯವಾಗುತ್ತದೆ. ಇಲ್ಲವಾದಲ್ಲಿ ಸಾಧ್ಯವಾಗುವುದಿಲ್ಲ. ಆದುದರಿಂದ, ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತರು ಅನುಮತಿ ನೀಡಿರುವುದನ್ನು ಖಚಿತ ಪಡಿಸಿಕೊಳ್ಳಲು https://krdh.karnataka.gov.in ವೆಬ್ ಸೈಟ್ ನಲ್ಲಿ ನೌಕರರ ಮತ್ತು ಅವರ ಕುಟುಂಬದ ಅವಲಂಬಿತರ ಆಧಾರ್ ಸಂಖ್ಯೆಯನ್ನು ಭರ್ತಿ ಮಾಡಿ ತಾವು ಅನುಮತಿ ಕೊಟ್ಟಿರುವ ಅಥವಾ ಕೊಟ್ಟಿಲ್ಲದಿರುವ ಬಗ್ಗೆ ಖಾತ್ರಿಪಡಿಸಿ ಕೊಳ್ಳಬಹುದಾಗಿದ್ದು, ಇದರ ವಿಧಾನವನ್ನು ಅನುಬಂಧದಲ್ಲಿ ನಮೂದಿಸಿದೆ.

..2

6. ಅನುಮತಿ ಈಗಾಗಲೇ ನೀಡಿದ ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತರ ಮಾಹಿತಿಯನ್ನು ಕೂಡಲೆ ಮಾನವ ಸಂಪನ್ಮೂಲ ಯೋಜನೆಯ ತಂತ್ರಾಂಶದಲ್ಲಿ ಅಳವಡಿಸಲು ಕೋರಿದೆ.

7. ಅನುಮತಿ ನೀಡದಿರುವ ಸರ್ಕಾರಿ ನೌಕರರು ಮತ್ತು ಅವಲಂಬಿತರಿಗಾಗಿ ನಾಡ ಕಛೇರಿಗಳಲ್ಲಿ ಹಾಗೂ ಬೆಂಗಳೂರುಒನ್ ಮತ್ತು ಕರ್ನಾಟಕಒನ್ ಕೇಂದ್ರಗಳಲ್ಲಿ ಅನುಮತಿಯನ್ನು ನೀಡುವ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದ್ದು, ದಿನಾಂಕ: 01.03.2015ರ ನಂತರ ಇಂತಹ ನೌಕರರು ಮತ್ತು ಅವಲಂಬಿತರು ಅಲ್ಲಿಗೆ ಭೇಟಿ ನೀಡಿ ತಮ್ಮ ಅನುಮತಿಯನ್ನು ದಾಖಲಿಸಬಹುದಾಗಿರುತ್ತದೆ. ಈ ರೀತಿ ಅನುಮತಿ ನೀಡಿದ ನಂತರ, ಅದನ್ನು ಮಾನವ ಸಂಪನ್ಮೂಲ ಯೋಜನೆಯ ತಂತ್ರಾಂಶದಲ್ಲಿ ಅಳವಡಿಸಲು ಕೋರಿದೆ.

8. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರುಗಳು ತಮ್ಮ ಅಧೀನದಲ್ಲಿರುವ ಎಲ್ಲಾ ಇಲಾಖಾ ಮುಖ್ಯಸ್ಥರ ಗಮನಕ್ಕೆ ಈ ಸುತ್ತೋಲೆಯಲ್ಲಿನ ಸೂಚನೆಗಳನ್ನು ತರಬೇಕೆಂದು ಕೋರಿದೆ ಹಾಗೂ ಇಲಾಖಾ ಮುಖ್ಯಸ್ಥರು ಅವರವರ ಅಧೀನದಲ್ಲಿ ಬರುವ ಬಟವಾಡೆ ಅಧಿಕಾರಿಯವರುಗಳು ಎಲ್ಲಾ ಸರ್ಕಾರಿ ನೌಕರರ ಮತ್ತು ಅವರ ಅವಲಂಬಿತರ ಆಧಾರ್ ಸಂಖ್ಯೆಯನ್ನು ಮಾನವ ಸಂಪನ್ಮೂಲ ಯೋಜನೆಯ ತಂತ್ರಾಂಶದಲ್ಲಿ ಅಳವಡಿಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಇದರಿಂದಾಗಿ ಸರ್ಕಾರಿ ನೌಕರರು "ಜ್ಯೋತಿ ಸಂಜೀವಿನಿ" ಯೋಜನೆಯ ಸೌಲಭ್ಯವನ್ನು ಸುಲಭವಾಗಿ ಪಡೆಯಲು ಆಸ್ಪದವಾಗುತ್ತದೆ.

18/3/2015
(ಎಸ್.ವೀಣಾ)
ಪೀಠಾಧಿಕಾರಿ-1,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ-ಆಡಳಿತ)

ರವರಿಗೆ,

ಸಂಕಲನಕಾರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ- ಈ ಸುತ್ತೋಲೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 500 ಪ್ರತಿಗಳನ್ನು ಪೀಠಾಧಿಕಾರಿ-1, ಸಿಆಸುಇ(ಇ-ಆಡಳಿತ), ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಒದಗಿಸಬೇಕೆಂದು ಕೋರಿದೆ.

<u>ಪ್ರತಿಗಳು:-</u>

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರುಗಳು.
2. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು / ಪ್ರಧಾನ ಕಾರ್ಯದರ್ಶಿಯವರು.
3. ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಯವರು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು-560001.
4. ಕರ್ನಾಟಕ ಸರ್ಕಾರ ಆರೋಗ್ಯ ಕಲ್ಯಾಣ ಟ್ರಸ್ಟಿನ ಅಧ್ಯಕ್ಷರು ಹಾಗೂ ಎಲ್ಲಾ ಟ್ರಸ್ಟಿಗಳಿಗೆ.
5. ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, 4ನೇ ಮಹಡಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಭವನ, ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು-27.
6. ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ, ಚಾಣುಕ್ಯಪುರಿ, ನವದೆಹಲಿ-11.

7. ಮಹಾ ನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
8. ನಿಬಂಧಕರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕಂದಾಯ ಭವನ, ಬೆಂಗಳೂರು.
9. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಡಾ:ಅಂಬೇಡ್ಕರ್ ವೀದಿ
10. ನಿಬಂಧಕರು, ಕರ್ನಾಟಕ ಮೇಲ್ಮನವಿ ಪ್ರಾಧಿಕಾರ, ಬಹುಮಹಡಿ ಕಟ್ಟಡ, ಬೆಂಗಳೂರು.
11. ಕಾರ್ಯದರ್ಶಿಯವರು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
12. ಎಲ್ಲಾ ಇಲಾಖಾ ಮುಖ್ಯಸ್ಥರವರುಗಳು.
13. ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಇ-ಆಡಳಿತ ಕೇಂದ್ರ
14. ನಿರ್ದೇಶಕರು, ಇಡಿಸಿಎಸ್ ನಿರ್ದೇಶನಾಲಯ
15. ಎಲ್ಲಾ ಪ್ರಾದೇಶಿಕ ಆಯುಕ್ತರವರುಗಳು.
16. ಎಲ್ಲಾ ಜಿಲ್ಲಾಧಿಕಾರಿಯವರುಗಳು.
17. ಎಲ್ಲಾ ಜಿಲ್ಲಾ ಪಂಚಾಯತ್ ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರುಗಳು.
18. ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಇನ್ ಫೆಂಟ್ರಿ ರಸ್ತೆ, ಬೆಂಗಳೂರು.(ಪತ್ರಿಕಾ ಪ್ರಕಟಣೆಗಾಗಿ).
19. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು
20. ಯೋಜನಾಧಿಕಾರಿ, ಹೆಚ್.ಆರ್.ಎಮ್.ಎಸ್ ಯೋಜನೆ, ಇ-ಆಡಳಿತ ಕೇಂದ್ರ
21. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಆಧಾರ್ ಸಂಖ್ಯೆಯು KRDH ಡೇಟಾಬೇಸ್ ನಲ್ಲಿ ಲಭ್ಯವಿದೆಯೇ ಎಂದು ಪರಿಶೀಲಿಸುವ ಬಳಕೆದಾರ ಕೈಪಿಡಿ

ಉದ್ದೇಶ: ಆಧಾರ್ ಸಂಖ್ಯೆಯು KRDH ಡೇಟಾಬೇಸ್ ನಲ್ಲಿ ಲಭ್ಯವಿದೆಯೇ ಮತ್ತು ಬಳಕೆದಾರರು ಆಧಾರ ಮಾಹಿತಿಯನ್ನು ಹಂಚಿಕೊಳ್ಳಲು ಒಪ್ಪಿಗೆ ನೀಡಿದ್ದಾರೆಯೇ ಎಂದು ಪರಿಶೀಲಿಸುವ ಕೈಪಿಡಿ. ಆಧಾರ ಸಂಖ್ಯೆಯ ಸಿಂಧುತ್ವವನ್ನು ಸಹ ಪರಿಶೀಲಿಸುತ್ತದೆ.

1. Web browser ನಲ್ಲಿ https://krdh.karnataka.gov.in ಎಂಬ URL ಅನ್ನು address bar ನಲ್ಲಿ ನಮೂದಿಸಿ. KRDHನ ಮುಖ ಪುಟ ಕೆಳಗಿನ ಪರದೆಯಂತೆ ಪ್ರದರ್ಶಿತಗೊಳ್ಳುತ್ತದೆ. KRDH ನ ಮುಖ ಪುಟದಲ್ಲಿ "Resident" ಗುಂಡಿಯನ್ನು ಕೆಳಗೆ ತೋರಿಸಿರುವಂತೆ ಕ್ಲಿಕ್ ಮಾಡಿ.



2. "Resident" ಗುಂಡಿಯನ್ನು ಕ್ಲಿಕ್ ಮಾಡಿದಾಗ ಕೆಳಗಿನ ಪರದೆಯು ಪ್ರದರ್ಶಿತಗೊಳ್ಳುತ್ತದೆ, ಅದರಲ್ಲಿ ಆಧಾರ್ ಸಂಖ್ಯೆಯನ್ನು ನಮೂದಿಸಿ "Click here for checking consent" ಎಂಬ ಲಿಂಕ್ ಮೇಲೆ ಕ್ಲಿಕ್ ಮಾಡಿ.



3. ಆಧಾರ್ ಸಂಖ್ಯೆಯು ಸರಿಯಾಗಿದ್ದ ಪಕ್ಷದಲ್ಲಿ ಮತ್ತು ಮಾಹಿತಿಯನ್ನು ಡೌನ್ ಲೋಡ್ ಮಾಡಲು ಒಪ್ಪಿಗೆ ನೀಡಿದ್ದರೆ, ಈ ಸಂದೇಶ ಪ್ರದರ್ಶಿತಗಳ್ಳುತ್ತದೆ. **"Consent is given for this Aadhaar number"**.



4. ಆಧಾರ್ ಸಂಖ್ಯೆಯು ಸರಿಯಾಗಿದ್ದು ಮತ್ತು ಮಾಹಿತಿಯನ್ನು ಡೌನ್ ಲೋಡ್ ಮಾಡಲು ಒಪ್ಪಿಗೆ ನೀಡಿರದಿದ್ದಲ್ಲಿ , ಈ ಸಂದೇಶ ಪ್ರದರ್ಶಿತಗೊಳ್ಳುತ್ತದೆ " No consent is given for this Aadhaar number( Error Code : 1113)".

5. ಆಧಾರ್ ಸಂಖ್ಯೆಯು ತಪ್ಪಾಗಿದ್ದ ಪಕ್ಷದಲ್ಲಿ ಈ ಕೆಳಗಿನ ಸಂದೇಶ ಪ್ರದರ್ಶಿತಗಳ್ಳುತ್ತದೆ. "Invalid Aadhaar number (Error Code : 1111)"

